ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ 346/ 2024
ಸಿಡಬ್ಲ್ಯೂ- 11
ಪಿಡಬ್ಲ್ಯೂ- 10

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ದೇಜಪ್ಪ |
| ತಂದೆಯ ಹೆಸರು | : | ಲೇಟ್ ಕಾಡ್ಯ |
| ಪ್ರಾಯ | : | 65 ವರ್ಷ |
| ಉದ್ಯೋಗ | : | ನಿವೃತ್ತ ಪಿ ಐ |
| ವಾಸ | : | ಆದಿ ಉಡುಪಿ |

ದಿನಾಂಕಃ **24- 03-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 12-09-2012 ರಿಂದ 16-04-2016 ರವರೆಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 14-10-2015 ರಂದು ಸಂಜೆ 5.30 ಗಂಟೆಗೆ ಠಾಣಾ ಉಸ್ತುವಾಗಿ ನಿಮಿತ್ತ ಉಡುಪಿ ನಿಸ್ತಂತು ಘಟಕದಿಂದ ಹತ್ತಾರು ಜೆಡ್ಡು ವಳಿಯಮ್ಮ ಎಂಬುವವರ ಮನೆಯಲ್ಲಿ ವಾಸು ಮತ್ತು ಶಾಂತ ಎಂಬುವವರು ಗಲಾಟೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಂತೆ ತಿಳಿಸಿದ ಮೇರೆಗೆ ನಾನು ಸಿಬ್ಬಂದಿಯೊಂದಿಗೆ ಪಿರ್ಯಾದಿದಾರರ ಮನೆಗೆ ಬೇಟಿ ನೀಡಿದ್ದು ಪಿರ್ಯಾದಿ ಒಂದು ಲಿಖಿತ ದೂರನ್ನು ನೀಡಿದ್ದು ಆ ದೂರನ್ನು ಸ್ವೀಕರಿಸಿ ಠಾಣೆಗೆ ಬಂದು ಅಪರಾಧ ಸಂಖ್ಯೆ 205/15 ರಂತೆ ಪ್ರಕರಣ ದಾಖಲಿಸಿಕೊಂಡು ಮೇಲಾಧಿಕಾರಿಯವರಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.

ದಿನಾಂಕ 15-10-2015 ರಂದು ಘಟನಾ ಸ್ಥಳದ ಮಹಜರು ಬಗ್ಗೆ ಪಿರ್ಯಾದಿದಾರರ ಮನೆಗೆ ಬೇಟಿ ನೀಡಿದ್ದು ಪಿರ್ಯಾದಿದಾರಳು ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾಗಿ ತಿಳಿದು ಬಂದಿದ್ದು ಠಾಣೆಗೆ ಬಂದಾಗ ಕುಂದಾಪುರ ಸರ್ಕಾರಿ ಆಸ್ಪತ್ರೆಯಿಂದ ಇ ಮೈಲ್ ಆದೇಶ ಬಂದಿರುವುದನ್ನು ತಿಳಿದುಕೊಂಡಿರುತ್ತೇನೆ. ದಿನಾಂಕ 20-10-2015 ರಂದು ಘಟನಾ ಸ್ಥಳವಾದ ಹತ್ತಾರು ಜೆಡ್ಡು ಪಿರ್ಯಾದಿಯ ಮನೆಗೆ ಬೇಟಿ ನೀಡಿದ್ದು ಪಿರ್ಯಾದಿದಾರಳು ಹಾಜರಿದ್ದು ಘಟನಾ ಸ್ಥಳದ ಸಾಕ್ಷಿದಾರರಾದ ದಿನೇಶ್ ಹಾಗೂ ಬಸವ ಶೆಟ್ಟಿಯವರ ಸಮಕ್ಷಮದಲ್ಲಿ  ತೋರಿಸಿಕೊಟ್ಟಿದ್ದನ್ನು 3.00 ರಿಂದ 3.45 ರವರೆಗೆ ಮಹಜರುನ್ನು ಬರೆಯಿಸಿರುತ್ತೇನೆ. ಸದರಿ ಮಹಜರು  ಈಗಾಗಲೆ ನಿ.ಪಿ.2 ಎಂದು ಗುರುತಿಸಲಾಗಿದ್ದು,ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರಾದ ದಿನೇಶ್ ಮಡಿವಾಳ, ಶ್ರೀಮತಿ ಅಮ್ಮು, ಶ್ರೀಮತಿ ಸುಭಾಶಿ, ಮನು, ಮಹೇಶ್ ಇವರುಗಳನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 03-11-2015 ರಂದು ಈ ಪ್ರಕರಣದ ಪಿರ್ಯಾದಿದಾರಳು ಠಾಣೆಗೆ ಬಂದು ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಹಾಗೂ ಆರೋಪಿಗಳು ತಕ್ಷೀರು ಪಡೆದ ಬಗ್ಗೆ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ಬಾಯಿತಪ್ಪಿನಿಂದ ಹೇಳಿರುವುದಾಗಿ ಮರುಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ದಿನಾಂಕ 06-02-2016 ರಂದು ಕುಂದಾಪುರ ಸರ್ಕಾರಿ ಆಸ್ಪತ್ರೆಯಿಂದ ಪಿರ್ಯಾದಿದಾರರು ಚಿಕಿತ್ಸೆ ಪಡೆದ ಬಗ್ಗೆ  ಮಂಗಳೂರು ವೆನ್ ಲಾಕ್ ಆಸ್ಪತ್ರೆಯಿಂದ ಗಾಯದ ಮಾಹಿತಿ  ಪತ್ರ ಪಡೆದಿರುತ್ತೇನೆ. ಸಾಕ್ಷಿ ಸದರಿ  ದಾಖಲೆ ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿರುತ್ತದೆ. ದಿನಾಂಕ 29-02-2016 ರಂದು ಪಿರ್ಯಾದಿದಾರಳು ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ  ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಪಡೆದಿರುತ್ತೇನೆ.  ಅದನ್ನು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ)  ಎಂದು ಗುರುತಿಸಲಾಯಿತು.

ದಿನಾಂಕ 08-03-20226 ರಂದು ಪಿರ್ಯಾದಿದಾರರಳು ವಾಸ್ತವ್ಯ ಇರುವ ಬಗ್ಗೆ ಹೆಂಗವಳ್ಳಿ PDO ಹೆಂಗವಳ್ಳಿ ಯವರಿಂದ  ವಾಸ್ತವ್ಯ ದೃಡಿಕರಣ ಪತ್ರವನ್ನು ಪಡೆದಿರುತ್ತೇನೆ. ಅದನ್ನು ನಿ.ಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ)  ಎಂದು ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಳಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ ಕೆ ರವರಿಂದ</u>

1. ನಾನು ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿತರ ವಿರುದ್ದ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ.

2. ಪಿರ್ಯಾದಿದಾರರು ಆಸ್ಪತ್ರೆಗೆ ದಾಖಲಾದ ಬಗ್ಗೆ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳ ಎಂದರೆ ಸರಿಯಲ್ಲ. ಆರೋಪಿತರಿಗೂ ಕೃತ್ಯಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ